## ಹ್ಯಾಂಗ ಕಟ್ಟತಿ?

ಸಂತೆಯಲ್ಲಿ ಎಮ್ಮೆ ಖರೀದಿಸಿ ಅದನ್ನು ತನ್ನ ಮನೆಯ ಕಡೆಗೆ ಹೊಡೆದುಕೊಂಡು ಹೋಗುತ್ತಿದ್ದ ಸಂಗವ್ವನನ್ನು ನೋಡಿ ಅವಳ ಗೆಳತಿ ಲಿಂಗವ್ವ ಕೇಳಿದಳು, 'ಎಮ್ಮಿ ತಂದ್ಯಾ ಸಂಗವ್ವ? ಎಷ್ಟು ಚಂದ ಅದ ನೋಡ್ ಎಮ್ಮಿ, ರೊಕ್ಕ ಭಾಳ ಆಯ್ತೇನೊ ಅಲ್ಲಬೆ?' ಅಂದಳು. ಸಂಗವ್ವ, 'ಹುಂ, ಈಗ ಎಲ್ಲಾ ತುಟ್ಟಿ ಆಗ್ಯಾವಲ್ಲಬೇ ಏನ್ಮಾಡೋದು? ಬ್ಯಾಂಕ್ನಾಗ ಸಾಲಾ ಮಾಡಿ ತಗೊಂಡು ಬಂದ್ನಿ' ಅಂದಳು. ಲಿಂಗವ್ವ, 'ಅಯ್ಯೋ ಶಿವನೆ... ಹ್ಯಾಂಗ ಕಟ್ಟತೀಯ ನಮ್ಮವ್ವ?' ಅಂದಳು. ಸಂಗವ್ವ, 'ಹೆಂಗ ಕಟ್ಟೂದಂದ್ರ? ಹಗ್ಗಾ ತಗೊಂಡು ಕಟ್ಟತೇನಿ' ಎಂದಳು.

**ಇಂದಿರಾ ಮೋಟೆಬೆನ್ನೂರ**





## ಅತ್ತೆಗೆ ಕಿವಿ ಕೇಳುತ್ತಿಲ್ಲ...

ಪರಮೇಶಿಯ ಹೆಂಡತಿ ಕಾಂತಾ ಅತ್ತೆಯನ್ನು ಕರೆದುಕೊಂಡು ವೈದ್ಯರ ಬಳಿ ಬಂದಳು. 'ಸರ್, ನಮ್ಮತ್ತೆಗೆ ಏನಾಗಿದೆ ನೋಡಿ. ಈಚೆಗೆ ಸರಿಯಾಗಿ ಕಿವಿ ಕೇಳಿಸುತ್ತಿಲ್ಲ ಅಂತ ಕಾಣುತ್ತೆ' ಎಂದಳು. ವೈದ್ಯರು, 'ನಿಮ್ಮಂಥ ಸೊಸೆ ಇರಬೇಕಮ್ಮಾ, ನಿಮಗೆ ಅತ್ತೆಯ ಮೇಲೆ ಅದೆಷ್ಟು ಪ್ರೀತಿ, ಕಾಳಜಿ!' ಎಂದರು. ಕಾಂತಾ, 'ಅಂಥದ್ದೇನಿಲ್ಲ ಸರ್, ಇತ್ತೀಚೆಗೆ ನಾನು ಏನೇ ಹೇಳಿದ್ರೂ ಇವರು ಪ್ರತಿಕ್ರಿಯೆನೇ ಕೊಡ್ತಾ ಇಲ್ಲ. ಹೀಗಾಗಿ, ನಮ್ಮ ನಡುವೆ ಜಗಳ ಕೂಡ ಆಗ್ತಾ ಇಲ್ಲ. ನನಗೆ ಭಯಂಕರ ಬೋರಾಗ್ತಿದೆ... ಮನೇಲಿ ಇಡೀ ದಿನ ನಾನೊಬ್ಬಳೇ ಏನು ಮಾಡಬೇಕು?' ಎಂದು ವೈದ್ಯರನ್ನು ಕೇಳಿದಳು!

**ಶಂಕರೇಗೌಡ ತುಂಬಕೆರೆ**